ವಿಶ್ವವಾಣಿ
ಬೆಂಗಳೂರು
vishwavani.news
11.02.2019 ಸೋಮವಾರ

## ಟ್ವೀಟು ಖಾರ



**ಮೋಹನ್ ದಾಸ್ ಪೈ**
@TVMohandasPai
ಬಜೆಟ್ ಮಂಡನೆಯಲ್ಲಿ ಕೇಂದ್ರ ಸಚಿವ ಅರುಣ್ ಜೇಟ್ಲಿ ಅವರನ್ನು ನಿಜವಾಗಿ ಮಿಸ್ ಮಾಡಿಕೊಂಡಿದ್ದೇವೆ. ಅವರು ಶೀಘ್ರವಾಗಿ ಗುಣಮುಖರಾಗಿ, ಉತ್ತಮ ಆರೋಗ್ಯ ಅವರದ್ದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿಕೊಳ್ಳೋಣ.



**ಗೀತಾ ಎಸ್ ಕಪೂರ್**
@GitaSKapoor
ಶಬರಿಮಲೆ ದೇವಸ್ಥಾನದ ಪ್ರವೇಶಕ್ಕೆ ಸುಪ್ರೀಕೋರ್ಟ್ ಅನುಮತಿ ನೀಡಿತ್ತು. ಈಗ ದೇವಸ್ಥಾನ ಮಂಡಳಿ ಕೂಡ ಇದಕ್ಕೆ ಒಪ್ಪಿಗೆ ಸೂಚಿಸಿದೆ. ಆದರೆ ಜನರು ಒಪ್ಪಿಗೆ ನೀಡುತ್ತಿಲ್ಲ.!



**ಪಿಯೂಷ್ ಗೋಯಲ್**
@PiyushGoyal
ನರೇಂದ್ರ ಮೋದಿ ಕರ್ನಾಟಕ್ಕೆ ಆಗಮಿಸಿ, ಧಾರವಾಡದಲ್ಲಿ ಐಐಟಿ ಕೇಂದ್ರದ ಶಂಕು ಸ್ಥಾಪನೆ ನೇರವೇರಿಸಿ, ಕನ್ನಡಿಗರಿಗೆ ಇನ್ನು ಅನೇಕ ಅಭಿವೃದ್ಧಿ ಯೋಜನೆಗಳನ್ನು ನೀಡುವುದರ ಮೂಲಕ ಜನರಿಗೆ ಸಂತಸ ನೀಡಿದ್ದಾರೆ.



**ಅಫ್ರಾಜ್ ಶಾ**
@AfrozShah1
ಮಿಥಿ ನದಿ ಅತಿ ಪ್ಲಾಸ್ಟಿಕ್ ಹೂಳಿನಿಂದ ತುಂಬಿದೆ. ಈ ನದಿಯ ಸ್ವಚ್ಛತೆಗೋಸ್ಕರ ಪ್ಲಾಸ್ಟಿಕ್ ಮುಕ್ತ ವಾತಾವರಣ ಎಂಬ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡು ಕಾರ್ಯ ನಿರ್ವಹಿಸುತ್ತಿದ್ದೇವೆ.!



**ಮಯಾಂಕ್ ಅಗರ್‌ವಾಲ್**
@journomayank
ಭಾರತ ಇಂದಿನಿಂದ 100 ದಿನದ ಚುನಾವಣೆ ಲೀಗ್‌ಗೆ ರೆಡಿಯಾಗುತ್ತಿದೆ. ಇದು ಮುಂದಿನ 5 ವರ್ಷದ ಭವಿಷ್ಯವನ್ನು ನಿರ್ಧರಿಸುತ್ತದೆ. ಇದರಲ್ಲಿ ಪ್ರಮುಖವಾಗಿ ಚುನಾವಣೆ ಜಾಹೀರಾತುಗಳದ್ದೇ ಕಾರುಬಾರು.!

ಆಂಧ್ರ ಪ್ರದೇಶದಲ್ಲಿ ವಿವಿಧ ಕಾಮಗಾರಿಗಳಿಗೆ ಪ್ರಧಾನಿ ಚಾಲನೆ | ಕೇಂದ್ರದ ಅನುದಾನ ಬಳಸಿಕೊಳ್ಳದ ಸಿಎಂ ವಿರುದ್ಧ ವಾಗ್ದಾಳಿ

# ಬೆನ್ನಿಗೆ ಚೂರಿ ಹಾಕುವುದರಲ್ಲಿ ನಾಯ್ಡು ನಿಸ್ಸೀಮ: ಮೋದಿ

**ಗುಂಟೂರು:** ಟಿಎಂಸಿ ನಾಯಕ ಹಾಗೂ ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ದಿ. ಎನ್‌ಟಿಆರ್‌ಗೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮೋಸ ಮಾಡಿದ್ದಾರೆ. ನಂಬಿದವರ ಬೆನ್ನಿಗೆ ಚೂರಿ ಹಾಕುವುದರಲ್ಲಿ ನಾಯ್ಡು ನಿಸ್ಸೀಮ ಎಂದು ಪ್ರಧಾನಿ ನರೇಂದ್ರ ಮೋದಿ ಹರಿಹಾಯ್ದಿದ್ದಾರೆ.

ಆಂಧ್ರಪ್ರದೇಶದ ಚಂದ್ರಬಾಬು ನಾಯ್ಡು ನೇತೃತ್ವದ ಟಿಡಿಪಿ ಸರಕಾರ ಎನ್‌ಡಿಎ ಮೈತ್ರಿ ಕೂಟದಿಂದ ಹೊರಬಿದ್ದ ಮೇಲೆ ಇದೇ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದರು. ಭಾನುವಾರ ಗುಂಟೂರಿನಲ್ಲಿ ಕೃಷ್ಣಪಟ್ಟಣಂ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್(ಬಿಪಿಸಿಎಲ್)ಗೆ ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ ನಂತರ 'ಪ್ರಜಾ ಚೈತನ್ಯ ಸಭಾ' ಎಂಬ ಸಾರ್ವಜನಿಕ ಸಮಾವೇಷದಲ್ಲಿ ಭಾಗವಹಿಸಿ, ರಾಜ್ಯದಲ್ಲಿ ಅಧಿಕಾರದಲ್ಲಿರುವ ಟಿಡಿಪಿ ಸರಕಾರವನ್ನು ತರಾಟೆಗೆ ತೆಗೆದುಕೊಂಡರು.

'ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ರಾಜ್ಯದ ಅಭಿವೃದ್ಧಿ ಮರೆತು ತಮ್ಮ ಕುಟುಂಬದ ಬಗ್ಗೆ ಪ್ರಚಾರ ಮಾಡಿ ಕೊಳ್ಳುತ್ತಿದ್ದಾರೆ. ಚಂದ್ರಬಾಬು ನಾಯ್ಡು ಅವರು ಆಂಧ್ರ ಪ್ರದೇಶವನ್ನು ಬೆಳಗಿಸುತ್ತೇನೆ ಎಂದು ಭರವಸೆ ನೀಡಿದ್ದರು. ಆದರೆ ಈಗ ತಮ್ಮ ಮಗನನ್ನು ಬೆಳೆಸುತ್ತಿದ್ದಾರೆ. ಅಭಿವೃದ್ಧಿ ವಿಚಾರದಲ್ಲಿ ಯೂ-ಟರ್ನ್ ತೆಗೆದುಕೊಂಡಿದ್ದಾರೆ' ಎಂದು ಆರೋಪಿಸಿದರು.

ಇತ್ತೀಚೆಗೆ ನಾಯ್ಡು ಅವರು, ತಾವು ಮೋದಿಯವರಿಗಿಂತ ದೊಡ್ಡವರು. ಆದರೂ ನಾನು ಅವರನ್ನು ಸರ್ ಎಂದು ಸಂಬೋಧಿಸುತ್ತೇನೆ. ಅವರ ಅಹಂಕಾರ ತೃಪ್ತಿಗಾಗಿ ಇದನ್ನು ಮಾಡುತ್ತೇನೆ ಎಂದಿದ್ದರು. ಈ ಮಾತನ್ನು ಇವತ್ತಿನ ಸಮಾವೇಶದಲ್ಲಿ ಪ್ರಸ್ತಾಪಿಸಿದ ಮೋದಿ, 'ಹೌದು, ಚಂದ್ರಬಾಬು ನಾಯ್ಡು ಅವರು ಹಿರಿಯರು. ಪಕ್ಷ ಬದಲಿಸುವಲ್ಲಿ, ಅವರ ಮಾವ ಎನ್.ಟಿ.ರಾಮರಾವ್‌ಗೆ ನಂಬಿಕೆ ದ್ರೋಹ ಮಾಡುವಲ್ಲಿ ಈಗಾಗಲೇ ಹಿರಿತನ ತೋರಿದ್ದಾರೆ. ಹಾಗೇ ತಮಗೆ ಬೇಕಾದಾಗ ಒಬ್ಬರನ್ನು ಹೊಗಳುವುದು, ಬೇಡವೆಂದ ಮರುಕ್ಷಣವೇ ಅವರನ್ನು ಕಡೆಗಣಿಸುವಲ್ಲಿ ಕೂಡ ನಾಯ್ಡು ಹಿರಿಯರು' ಎಂದು ವ್ಯಂಗ್ಯವಾಡಿದರು.

ಚಂದ್ರಬಾಬು ನಾಯ್ಡು ಅವರು ಶ್ರೀಮಂತ ರಾಜಕಾರಣಿ. ಅಪ್ಪ-ಮಗನ ಸರಕಾರಕ್ಕೆ ಕ್ಷಣಗಣನೆ ಶುರುವಾಗಿದ್ದು ಬರುವ ಚುನಾವಣೆಯಲ್ಲಿ ಸೋಲು ಖಚಿತ ಎಂದು ಹೇಳಿದರು.

ಈ ಕಾರ್ಯಕ್ರಮಕ್ಕೆ ಆಗಮಿಸಿದ ಮೋದಿಯವರನ್ನು ಸ್ವಾಗತಿಸಲು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಶಿಷ್ಟಾಚಾರಕ್ಕೂ ಏರ್‌ಪೋರ್ಟ್‌ಗೆ ಹೋಗಲಿಲ್ಲ. ರಾಜ್ಯಪಾಲ ಇಸಿಎಲ್ ನರಸಿಂಹನ್ ಅವರು ವಿಜಯವಾಡದ ಏರ್‌ಪೋರ್ಟ್‌ಗೆ ತೆರಳಿ ಮೋದಿಯವರನ್ನು ಸ್ವಾಗತಿಸಿದರು.

ಪ್ರಧಾನಿ ಮೋದಿ ಆಂಧ್ರ ಭೇಟಿ ಕುರಿತು ಶನಿವಾರ ಮಾತನಾಡಿದ್ದ ಚಂದ್ರಬಾಬು ನಾಯ್ಡು, ಒಂದೊಮ್ಮೆ ಮೋದಿಯವರು ನಮ್ಮ ರಾಜ್ಯಕ್ಕೆ ಆಗಮಿಸಿದರೆ ಅದು ರಾಜ್ಯದ ಪಾಲಿಕೆ ಕರಾಳ ದಿನವಾಗಲಿದೆ. ನಮ್ಮ ರಾಜ್ಯದ ಮಣ್ಣು ಅಪವಿತ್ರಗೊಳ್ಳಲಿದೆ ಎಂದು ಟೀಕಿಸಿದ್ದರು.



## ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

**ಪ್ರಧಾನಿ ನರೇಂದ್ರ ಮೋದಿ ಅವರು ಆಂಧ್ರ ಪ್ರದೇಶದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು. ವಿಶಾಖಪಟ್ಟಣಂನ 'ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್' ಗೆ 1.33 ಮಿಲಿಯನ್ ನೀಡಲಾಗಿದೆ. ಭಾರತ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ ಲಿಮಿಟೆಡ್ (ಐಎಸ್‌ಪಿಆರ್‌ಎಲ್) ಗೆ 1,178 ಕೋಟಿ ಕೊಡಲಾಗಿದೆ. ಕೃಷ್ಣಪಟ್ಟಣಂನ ಭಾರತ್ ಪೆಟ್ರೋಲಿಯಂ ಕಾರ್ಪೋರೆಷನ್‌ಲಿಮಿಟೆಡ್‌ಗೆ 700 ಕೋಟಿ ಮೀಸಲಿರಿಸಲಾಗಿದೆ.**

## ಮೋದಿ ಪ್ರವಾಸಕ್ಕೆ ವಿರೋಧ




**ಪ್ರಧಾನಿ ನರೇಂದ್ರ ಮೋದಿ ಭಾನುವಾರ ಆಂಧ್ರಪ್ರದೇಶದ ಗುಂಟೂರ್‌ಗೆ ಭೇಟಿ ನೀಡುವ ಮುನ್ನ ಮೋದಿಗೆ ಪ್ರವೇಶವಿಲ್ಲ ಎಂಬ ಬೃಹತ್ ಫಲಕಗಳನ್ನು ಹಾಕುವ ಮೂಲಕ ಮೋದಿ ಭೇಟಿಗೆ ತೀವ್ರ ವಿರೋಧ ವ್ಯಕ್ತಪಡಿಸಲಾಗಿತ್ತು. ಶನಿವಾರ ಗುಂಟೂರ್ ಮತ್ತು ವಿಜಯವಾಡಗಳ ಸಾರ್ವಜನಿಕ ಜಾಹೀರಾತು ಫಲಕಗಳಲ್ಲಿ 'ಮೋದಿ ನೋ ಎನ್‌ಟ್ರಿ' (ಮೋದಿಗೆ ಪ್ರವೇಶವಿಲ್ಲ) ಮತ್ತು 'ಮೋದಿ ನೆವೆರ್ ಅಗೇನ್' (ಅಧಿಕಾರಕ್ಕೆ ಮತ್ತೆ ಮೋದಿ ಬರಬಾರದು) ಎಂದು ಬರೆಯಲಾಗಿದ್ದು, ಆಂಧ್ರ ಬಿಜೆಪಿ ವಿರುದ್ಧ ಕಿಡಿಕಾರಲಾಗಿತ್ತು. ಈ ರೀತಿ ಫಲಕ ಸ್ಥಾಪಿಸಿದ್ದು, ಯಾರು ಎಂಬುದರ ಬಗ್ಗೆ ಯಾವುದೇ ಪಕ್ಷ ಹೊಣೆ ಹೊತ್ತಿಲ್ಲ. ಆದರೆ ಈ ಹಿಂದೆ ತೆಲುಗು ದೇಶಂ ಪಾರ್ಟಿ ಜಾಹೀರಾತು ಇದ್ದ ಫಲಕದಲ್ಲಿಯೇ ಮೋದಿ ವಿರೋಧಿ ಘೋಷಣೆ ಕಂಡು ಬಂದಿದ್ದರಿಂದ ಇದು ಆಡಳಿತದಲ್ಲಿರುವ ತೆಲುಗು ದೇಶಂ ಪಕ್ಷದ ಕೆಲಸ ಎಂಬ ಅನುಮಾನ ವ್ಯಕ್ತವಾಗಿದೆ.**

## ಭಾರತಕ್ಕೆ ನಾಲ್ಕು ಚಿನೂಕ್ ಹೆಲಿಕಾಪ್ಟರ್

**ದೆಹಲಿ:** ಭಾರತೀಯ ವಾಯುಪಡೆಗೆ ಅನುಕೂಲವಾಗಲಿರುವ ಸುಧಾರಿತ ನಾಲ್ಕು ಮಲ್ಟಿಮಿಶನ್ ಸಿಎಚ್47ಎಫ್(1) ಚಿನೂಕ್ ಹೆಲಿಕಾಪ್ಟರ್‌ಗಳು ಗುಜರಾತಿನ ಮುಂದ್ರಾ ಬಂದರಿಗೆ ಆಗಮಿಸಿವೆ. ಬಂದರಿನಿಂದ ಈ ಹೆಲಿಕಾಪ್ಟರ್‌ಗಳನ್ನು ಚಂಡೀಗಡಕ್ಕೆ ಕೊಂಡೊಯ್ದು, ವರ್ಷಾಂತ್ಯಕ್ಕೆ ಅವುಗಳನ್ನು ಅಧಿಕೃತವಾಗಿ ಭಾರತೀಯ ವಾಯುಪಡೆಗೆ ಸೇರಿಸಿಕೊಳ್ಳಲಾಗುವುದು ಎಂದು ಬೋಯಿಂಗ್ ಸಂಸ್ಥೆ ತನ್ನ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ. ಭಾರತೀಯ ವಾಯುಪಡೆ ಸದ್ಯ 15 ಚಿನೂಕ್ ಹೆಲಿಕಾಪ್ಟರ್‌ಗಳ ಖರೀದಿಗೆ ಮುಂದಾಗಿದ್ದು, ಈ ಹೆಲಿಕಾಪ್ಟರ್‌ಗಳ ಮೂಲಕ ಭಾರೀ ಪ್ರಮಾಣದ ಯುದ್ಧ ಸರಕು ಸಾಮಗ್ರಿಗಳನ್ನು ಎತ್ತರದ ಪರ್ವತ ಪ್ರದೇಶಗಳಿಗೆ ಏರ್ ಲಿಫ್ಟ್ ಮಾಡಬಹುದಾಗಿದೆ. ಇದರಿಂದ ಹಿಮಾಲಯ ಹಾಗೂ ಪರ್ವತ ಪ್ರದೇಶಗಳಲ್ಲಿ ಸೇನೆಗೆ ಅಗತ್ಯವಿರುವ ಶಸ್ತ್ರಾಸ್ತ್ರ ಹಾಗೂ ವಸ್ತುಗಳನ್ನು ತಲುಪಿಸಲು ನೆರವಾಗಲಿದೆ. ಇಷ್ಟು ಮಾತ್ರವಲ್ಲದೇ 22 ಅಪಾಚೆ ದಾಳಿ ಹೆಲಿಕಾಪ್ಟರ್ ಖರೀದಿಗೂ ಭಾರತ ಮುಂದಾಗಿದೆ.

## ರಾಹುಲ್ ಗಾಂಧಿಗೆ ಹೊಟ್ಟೆಕಿಚ್ಚು: ಜೇಟ್ಲಿ



**ದೆಹಲಿ:** ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಒಟ್ಟಾಗಿರುವ ವಿಪಕ್ಷಗಳ ವಿರುದ್ಧ ಟೀಕಾ ಪ್ರಹಾರ ನಡೆಸಿದ ಹಣಕಾಸು ಸಚಿವ ಅರುಣ್ ಜೇಟ್ಲಿ, 'ಸಂಸ್ಥೆಗಳ ರಕ್ಷಕರು ಎಂದು ಹೇಳಿಕೊಂಡು ಬರುತ್ತಿರುವವರು ಪ್ರಜಾಪ್ರಭುತ್ವಕ್ಕಾಗಿ ಮೊಸಳೆ ಕಣ್ಣೀರು ಹಾಕುತ್ತಿದ್ದಾರೆ. ಮೋದಿ ಸಾಧನೆಯನ್ನು ಕಂಡು ಅವರ ವಿರುದ್ಧ ಹೊಟ್ಟೆಕಿಚ್ಚಿನಿಂದ ಟೀಕಿಸುತ್ತಿದ್ದಾರೆ' ಎಂದಿದ್ದಾರೆ. 'ಸರಕಾರವನ್ನು ಗರಿಷ್ಠ ಮಟ್ಟಕ್ಕೆ ಟೀಕಿಸುವ ಅವರು ವಾಕ್ ಸ್ವಾತಂತ್ರ ಅಪಾಯದಲ್ಲಿದೆ ಎನ್ನುತ್ತಾರೆ. ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎನ್ನುತ್ತಾ, ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವವನ್ನು ಕುಟುಂಬದ ಆಸ್ತಿಯಂತೆ ಬಿಂಬಿಸಲು ನೋಡುತ್ತಾರೆ' ಎಂದು ಕಾಂಗ್ರೆಸ್ ವಿರುದ್ಧ ಜೇಟ್ಲಿ ವಾಗ್ದಾಳಿ ನಡೆಸಿದ್ದಾರೆ. ಅಮೆರಿಕದಲ್ಲಿ ಚಿಕಿತ್ಸೆ ಪಡೆದು ಭಾರತಕ್ಕೆ ಮರಳಿದ ಬಳಿಕ ತಮ್ಮ ಫೇಸ್ಬುಕ್ ಪೋಸ್ಟ್‌ನಲ್ಲಿ ಜೇಟ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದು, 'ರಫೇಲ್ ಕುರಿತಂತೆ ರಾಹುಲ್ ಗಾಂಧಿ ಭಾಷಣವನ್ನು ವಿಶ್ಲೇಷಿಸಿ ನೋಡಿದಾಗ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಹೊಟ್ಟೆ ಉರಿಯಲ್ಲಿ ವೈಯಕ್ತಿಕ ದ್ವೇಷ ತುಂಬಿ ಮಾತನಾಡುವುದು ಕಂಡುಬರುತ್ತದೆ. ತರಗತಿಯ ಅಗ್ರ ವಿದ್ಯಾರ್ಥಿಯನ್ನು ಅನುತ್ತೀರ್ಣನಾದ ವಿದ್ಯಾರ್ಥಿ ಸದಾ ದ್ವೇಷಿಸಿದಂತೆ ರಾಹುಲ್ ಅಸೂಯೆ ಪಡುತ್ತಿದ್ದಾರೆ ಎಂದು ಹೇಳಿದ್ದಾರೆ.

## ಸೇನಾ ಎನ್‌ಕೌಂಟರ್ ಐವರು ಉಗ್ರರ ಹತ್ಯೆ



**ಕುಲ್‌ಗಮ್:** ಜಮ್ಮು ಕಾಶ್ಮೀರದ ಕುಲ್‌ಗಮ್ ಜಿಲ್ಲೆಯಲ್ಲಿ ನಡೆದ ದಾಳಿಯಲ್ಲಿ ಭದ್ರತಾ ಪಡೆ ಐವರು ಭಯೋತ್ಪಾದಕರನ್ನು ಹೊಡೆದುರುಳಿಸಿದ್ದು, ಸ್ಥಳದಲ್ಲಿ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳು ಹಾಗೂ ಸ್ಪೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸೇನಾಧಿಕಾರಿಗಳು ತಿಳಿಸಿದ್ದಾರೆ. ಭಾನುವಾರ ಬೆಳಗಿನ ಜಾವ ಭದ್ರತಾ ಪಡೆ ಮತ್ತು ಭಯೋತ್ಪಾದಕರ ನಡುವೆ ತೀವ್ರ ಗುಂಡಿನ ಚಕಮಕಿ ನಡೆದಿತ್ತು ಎಂದು ಸೇನಾ ವರದಿ ಹೇಳಿದೆ. ಸಾರ್ವಜನಿಕರು ಎನ್ ಕೌಂಟರ್ ನಡೆದ ಸ್ಥಳಕ್ಕೆ ಹೋಗ ಕೂಡದು ಹಾಗೂ ಯಾವುದೇ ಶಸ್ತ್ರಾಸ್ತ್ರಗಳು ದೊರೆತರೂ ಅದರ ಕುರಿತು ಭದ್ರತಾ ಪಡೆಗಳಿಗೆ ತಿಳಿಸಬೇಕು ಎಂದು ಭದ್ರತಾ ಪೋಲಿಸರು ತಿಳಿಸಿದ್ದಾರೆ.

## ಕೋಲ್ಕತಾ ಪೊಲೀಸ್ ಮುಖ್ಯಸ್ಥ, ಮಾಜಿ ಸಂಸದರ ವಿಚಾರಣೆ

**ಶಿಲ್ಲಾಂಗ್:** ಶಾರದಾ ಚಿಟ್ ಫಂಡ್ ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ಭಾನುವಾರಕೋಲ್ಕತಾ ಪೊಲೀಸ್ ಆಯುಕ್ತ ರಾಜೀವ್ ಕುಮಾರ್ ಮತ್ತು ತೃಣಮೂಲ ಕಾಂಗ್ರೆಸ್ ಮಾಜಿ ಸಂಸದ ಕುನಾಲ್ ಘೋಷ್ ಅವರನ್ನು ವಿಚಾರಣೆಗೆ ಒಳಪಡಿಸಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ನಂತರ ರಾಜೀವ್ ಕುಮಾರ್ ಅವರನ್ನು ಸಿಬಿಐ ವಿಚಾರಣೆ ನಡೆಸುತ್ತಿದ್ದು, ಸತತ ಎರಡನೇ ದಿನ ಪ್ರಶ್ನೆ ಮಾಡಿದೆ. ಶನಿವಾರ ಸುಮಾರು 9 ಗಂಟೆಗಳ ಕಾಲ ರಾಜೀವ್ ಅವರನ್ನು ವಿಚಾರಣೆಗೆ ಒಳಪಡಿಸಿದ್ದ ಸಿಬಿಐ ಅಧಿಕಾರಿಗಳು ಭಾನುವಾರವೂ ತಮ್ಮ ತನಿಖೆ ಮುಂದುವರಿಸಿದರು.

ಶಾರದಾ ಚಿಟ್ ಫಂಡ್ ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ವಿಚಾರಣೆ ಆರಂಭವಾಗುವ ಮುನ್ನ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ರಚಿಸಿದ್ದ ವಿಶೇಷ ತನಿಖಾ ತಂಡದ ಮುಖ್ಯಸ್ಥರಾಗಿದ್ದ ರಾಜೀವ್ ಕುಮಾರ್, ಹಗರಣಕ್ಕೆ ಸಂಬಂಧಿಸಿದ ಪ್ರಮುಖ ಸಾಕ್ಷ್ಯಾಧಾರಗಳನ್ನು ನಾಶ ಪಡಿಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಹೀಗಾಗಿ ಅವರನ್ನು ವಿಚಾರಣೆ ನಡೆಸುತ್ತಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇನ್ನು ಮಾಜಿ ಸಂಸದ ಕುನಾಲ್ ಘೋಷ್ ಅವರು ಬೆಳಗ್ಗೆ 10 ಗಂಟೆ ಸುಮಾರಿಗೆ ಒಕ್ಲಾಂಡ್‌ನಲ್ಲಿರುವ ಸಿಬಿಐ ಕಚೇರಿಗೆ ಆಗಮಿಸಿದ್ದು ವಿಚಾರಣೆಗೆ ಹಾಜರಾಗಿದ್ದಾರೆ. ಇನ್ನು ವಿಚಾರಣೆಗೆ ಹಾಜರಾಗುವ ಮುನ್ನ ಸಿಬಿಐ ಕಚೇರಿಯಿಂದ 100 ಮೀ. ದೂರದಲ್ಲಿರುವ ಸರಸ್ವತಿ ಮಂದಿರದಲ್ಲಿ ಪೂಜೆ ಸಲ್ಲಿಸಿದರು. ಈ ಹಗರಣಕ್ಕೆ ಸಂಬಂಧಿಸಿದಂತೆ 2013ರಲ್ಲಿ ಕುನಾಲ್ ಘೋಷ್ ಬಂಧನರಾಗಿದ್ದು, 2016ರಲ್ಲಿ ಜಾಮೀನಿನ ಮೇಲೆ ಹೊರಬಂದಿದ್ದಾರೆ. ಈಗ ಸಿಬಿಐ ಅಧಿಕಾರಿಗಳು ಕುಮಾರ್ ಹಾಗೂ ಕುನಾಲ್ ಅವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.



ಕಳೆದವಾರ ಸಿಬಿಐ ಅಧಿಕಾರಿಗಳು ರಾಜೀವ್ ಕುಮಾರ್ ಅವರನ್ನು ವಿಚಾರಣೆ ಮಾಡಲು ಕೋಲ್ಕತಾಗೆ ತೆರಳಿದ ಸಂದರ್ಭಗಲ್ಲಿ ಕೋಲ್ಕತಾ ಪೊಲೀಸರು ಸಿಬಿಐ ಅಧಿಕಾರಿಗಳನ್ನೇ ಬಂಧಿಸಿದ ಘಟನೆ ರಾಷ್ಟ್ರಾದ್ಯಂತ ವಿವಾದಕ್ಕೆ ಕಾರಣವಾಗಿತ್ತು. ನಂತರ ಸುಪ್ರೀಂ ಕೋರ್ಟ್ ಸಿಬಿಐ ವಿಚಾರಣೆಗೆ ಹಾಜರಾಗುವಂತೆ ರಾಜೀವ್‌ಗೆ ಹಾಗೂ ಅವರನ್ನು ಬಂಧಿಸದಂತೆ ಸಿಬಿಐಗೆ ನಿರ್ದೇಶನ ನೀಡಿತ್ತು.

## ಪ್ರಿಯಾಂಕಾ ಬಗ್ಗೆ ವಿವಾದಾತ್ಮಕ ಹೇಳಿಕೆ

**ದೆಹಲಿ:** ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ದೆಹಲಿಯಲ್ಲಿರುವಾಗ ಜೀನ್ಸ್ ಮತ್ತು ಟಾಪ್ ಧರಿಸುತ್ತಾರೆ. ಆದರೆ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡುವಾಗ ಸೀರೆ ಮತ್ತು ಸಿಂಧೂರ ತೊಟ್ಟುಕೊಳ್ಳುತ್ತಾರೆ ಎಂಬ ಹೇಳಿಕೆ ನೀಡಿ ಉತ್ತರಪ್ರದೇಶದ ಬಿಜೆಪಿ ಸಂಸದ ಹರೀಶ್ ದ್ವಿವೇದಿ ಸುದ್ದಿಯಾಗಿದ್ದಾರೆ.

ಉತ್ತರಪ್ರದೇಶದ ಬಸ್ತಿ ಜಿಲ್ಲೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ದ್ವಿವೇದಿ, ರಾಹುಲ್ ಮತ್ತು ಪ್ರಿಯಾಂಕಾ ಇಬ್ಬರೂ ವಿಫಲರಾಗಿದ್ದಾರೆ ಎಂದಿದ್ದಾರೆ. ಪ್ರಿಯಾಂಕ ವಿರುದ್ಧ ಬಿಜೆಪಿ ನಾಯಕರ ವಿವಾದಾತ್ಮಕ ಹೇಳಿಕೆ ಇದೇ ಮೊದಲಲ್ಲ. ಜನವರಿಯಲ್ಲಿ ಬಿಹಾರ ಸಚಿವ ವಿನೋದ್ ನಾರಾಯಣ್ ಝಾ ಪ್ರಿಯಾಂಕಾ ಸುಂದರಿ ಹೌದು ಆದರೆ ಅವರು ರಾಜಕೀಯದಲ್ಲಿ ಸಾಧನೆಗಳೇನೂ ಮಾಡಿಲ್ಲ ಎಂದಿದ್ದರು. ಚೆಂದದ ಮುಖ ನೋಡಿ ಯಾರು ಮತ ಹಾಕುವುದಿಲ್ಲ. ಆಕೆ ಭೂಹಗರಣ ಮತ್ತು ಭ್ರಷ್ಟಾಚಾರ ಪ್ರಕರಣದಲ್ಲಿ ಭಾಗಿಯಾಗಿರುವ ರಾಬರ್ಟ್ ವಾದ್ರಾ ಅವರ ಹೆಂಡತಿ. ಆಕೆ ತುಂಬಾ ಚೆಲುವೆ, ಆದರೆ ರಾಜಕೀಯ ಸಾಧನೆ ಆಗಲೀ, ಪ್ರತಿಭೆಯಾಗಲೀ ಆಕೆಗಿಲ್ಲ ಎಂದು ಹೇಳಿದ್ದರು.

ಬಿಜೆಪಿ ಸಂಸದ ಸುಬ್ರಮಣಿಯನ್ ಸ್ವಾಮಿ, ಪ್ರಿಯಾಂಕಾ ಗಾಂಧಿಗೆ ಬೈಪೋಲಾರ್ ಸಮಸ್ಯೆ ಇದ್ದು, ಆಕೆ ಸಾರ್ವಜನಿಕ ಜೀವನವನ್ನು ಮುನ್ನಡೆಸಲು ಸಮರ್ಥಳಾಗಿಲ್ಲ ಎಂದಿದ್ದರು. ಇನ್ನೊಬ್ಬ ಬಿಜೆಪಿ ನಾಯಕ ಕೈಲಾಶ್ ವಿಜಯ್ ಅವರು ಚಾಕ್ಲೆಟ್ ಫೇಸ್‌ಗಳನ್ನು ಮುಂದಿರಿಸಿ ಚುನಾವಣೆ ಕಣಕ್ಕಿಳಿದಿವೆ ಎಂದಿದ್ದರು.

## ಹಿಮದಲ್ಲಿ ಗರ್ಭಿಣಿಗೆ ಯುವಕರ ನೆರವು

**ಕಾಶ್ಮೀರ:** ಭಾರಿ ಹಿಮಪಾತದಿಂದ ರಸ್ತೆಗಳು ಬ್ಲಾಕ್ ಆಗಿದ್ದರಿಂದ ಸರಿಯಾದ ಸ್ಥಳಕ್ಕೆ ಆಂಬುಲೆನ್ಸ್ ಬರಲು ಸಾಧ್ಯವಾಗದ ಕಾರಣ ಮೊಣಕಾಲಿನವರೆಗೆ ಹೂತುಹೋಗುವ ಹಿಮದ ರಾಶಿ ಮೇಲೆ ಯುವಕರು ಗರ್ಭಿಣಿಯನ್ನು ಸುಮಾರು 7 ಕಿ.ಮೀ. ವರೆಗೆ ಹೊತ್ತು ಆಸ್ಪತ್ರೆಗೆ ದಾಖಲಿಸಿದ ಘಟನೆ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದಿದೆ.

ಇತ್ತೀಚೆಗೆ ಉತ್ತರ ಕಾಶ್ಮೀರದಲ್ಲಿ ಗರ್ಭಿಣಿಯೊಬ್ಬರನ್ನು ಆಸ್ಪತ್ರೆಗೆ ಸಾಗಿಸಲು ಬಂದಿದ್ದ ಆಂಬುಲೆನ್ಸ್ ಮಾರ್ಗ ಮಧ್ಯೆಯೇ ಹಿಮಪಾತಕ್ಕೆ ಸಿಲುಕಿತ್ತು. ಅನಿವಾರ್ಯ ಪರಿಸ್ಥಿತಿಯಲ್ಲಿ ಮೊಣಕಾಲಿನವರೆಗೆ ಹೂತುಹೋಗುವ ಹಿಮರಾಶಿಯ ಮೇಲೆ ಗರ್ಭಿಣಿಯನ್ನು ಸ್ಟ್ರೆಚರ್ ಮೂಲಕ ಆಸ್ಪತ್ರೆಗೆ ಹೊತ್ತೊಯ್ಯುವ ಮೂಲಕ ಯುವಕರು ನೆರವಾಗಿದ್ದಾರೆ. ಈ ಸಂದರ್ಭದ ವಿಡಿಯೋ ಈಗ ಎಲ್ಲೆಡೆ ವೈರಲ್ ಆಗಿದೆ.

## ಸತ್ಯಕ್ಕೆ ಜಯ ಸಿಗುತ್ತದೆ: ವಾದ್ರಾ



**ದೆಹಲಿ:** ಲಂಡನ್‌ನಲ್ಲಿ ಅಕ್ರಮ ಆಸ್ತಿ ಸಂಪಾದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಹಾಗೂ ಜಾರಿ ನಿರ್ದೇಶನಾಲಯಗಳ ಮುಂದೆ ಸತತ ವಿಚಾರಣೆಗೆ ಹಾಜರಾಗುತ್ತಿರುವ ಕಾಂಗ್ರೆಸ್ ನಾಯಕಿ ಪ್ರಿಯಾಂಕ ವಾದ್ರಾ ಪತಿ ರಾಬರ್ಟ್ ವಾದ್ರಾ, ಸತ್ಯಕ್ಕೆ ಜಯ ಸಿಗುತ್ತದೆ ಎಂದು ತಮ್ಮ ಫೇಸ್ ಬುಕ್‌ನಲ್ಲಿ ಬರೆದುಕೊಂಡಿದ್ದಾರೆ. 'ಸತ್ಯಕ್ಕೆ ಯಾವಾಗಲೂ ಜಯ ಸಿಗುತ್ತದೆ ಎಂದು ಹೇಳಿದ್ದಾರೆ. ಈ ಹೊತ್ತಿನಲ್ಲಿ ನನ್ನ ಜೊತೆಗಿರುವ ಮತ್ತು ನನ್ನ ಬೆಂಬಲಕ್ಕೆ ನಿಂತಿರುವ ಕುಟುಂಬದವರು, ಸ್ನೇಹಿತರು, ಬಂಧುಗಳಿಗೆ ನಾನು ಧನ್ಯವಾದ ಹೇಳುತ್ತೇನೆ. ನಾನು ಚೆನ್ನಾಗಿದ್ದೇನೆ. ಯಾವ ಪರಿಸ್ಥಿತಿಯನ್ನು ಕೂಡ ನಿಭಾಯಿಸುವ ಶಕ್ತಿ ನನಗೆ ಸಿಕ್ಕಿದೆ. ಸತ್ಯಕ್ಕೆ ಯಾವಾಗಲೂ ಜಯ ಸಿಗುತ್ತದೆ ಎಂದು ನಂಬಿದ್ದೇನೆ. ಎಲ್ಲರಿಗೂ ಶುಭವಾರ' ಎಂದು ಬರೆದುಕೊಂಡಿದ್ದಾರೆ. ಕಳೆದ ಒಂದು ವಾರದ ಅವಧಿಯಲ್ಲಿ ಸಿಬಿಐ ಅಧಿಕಾರಿಗಳು ವಾದ್ರಾ ಅವರನ್ನು ಮೂರು ಬಾರಿ ವಿಚಾರಣೆ ಮಾಡಿದ್ದು, ಸುಮಾರು 11 ಗಂಟೆಗಳಿಗೂ ಹೆಚ್ಚು ಕಾಲ ಪ್ರಶ್ನೆ ಮಾಡಿದ್ದಾರೆ.

## ಮಹಾಘಟಬಂಧನದಲ್ಲಿ ಆರು ಪ್ರಧಾನಿಗಳು



**ದೆಹಲಿ:** ವಿರೋಧ ಪಕ್ಷಗಳ ಮಹಾಮೈತ್ರಿ ಅಧಿಕಾರಕ್ಕೆ ಬಂದಿದ್ದೇ ಆದರೆ ಆರು ಪ್ರಧಾನಿಗಳು ದೇಶವನ್ನು ಆಳಲಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಕುಟುಕಿದ್ದಾರೆ. ಪಣಜಿಯಲ್ಲಿ ಶನಿವಾರ ಮಾತನಾಡಿದ ಶಾ, 'ಲೋಕಸಭೆ ಚುನಾವಣೆಯಲ್ಲಿ ಪ್ರತಿಪಕ್ಷಗಳು ಗೆದ್ದರೆ ಪ್ರತಿಯೊಂದು ಪಕ್ಷಗಳ ಒಬ್ಬ ನಾಯಕರು ವಾರದಲ್ಲಿ ಆರು ದಿನ ಪ್ರಧಾನ ಮಂತ್ರಿ ಹುದ್ದೆ ನಿಭಾಯಿಸಿ ಭಾನುವಾರ ದೇಶಕ್ಕೆ ರಜೆ ಕೊಟ್ಟುಬಿಡುತ್ತಾರೆ. ಸೋಮವಾರ ಮಾಯಾವತಿ, ಮಂಗಳವಾರ ಅಖಿಲೇಶ್, ಬುಧವಾರ ಹೆಚ್‌ಡಿ ದೇವೇಗೌಡ, ಗುರುವಾರ ಚಂದ್ರಬಾಬು ನಾಯ್ಡು,ಸ್ಟಾಲಿನ್ ಶುಕ್ರವಾರ ಮತ್ತು ಶರದ್ ಪವಾರ್ ಶನಿವಾರ ಪ್ರಧಾನಿಯಾಗುತ್ತಾರೆ. ಭಾನುವಾರ ದೇಶಕ್ಕೆ ರಜೆ ನೀಡುತ್ತಾರೆ' ಎಂದು ಟೀಕಿಸಿದರು.

## ರಕ್ಷಣಾ ಕಾರಿಡಾರ್‌ನಿಂದ 3.5 ಲಕ್ಷ ಉದ್ಯೋಗ: ಸಚಿವೆ



**ದೆಹಲಿ:** ಉತ್ತರ ಪ್ರದೇಶ ಹಾಗೂ ತಮಿಳುನಾಡಿನಲ್ಲಿ ರಕ್ಷಣಾ ಕಾರಿಡಾರ್ ನಿರ್ಮಾಣ ಯೋಜನೆಯಿಂದ ಈ ರಾಜ್ಯಗಳಲ್ಲಿ 3.5 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಕೇಂದ್ರ ರಕ್ಷಣಾ ಸಚಿವೆ ನಿರ್ಮಾಲ ಸೀತರಾಮನ್ ತಿಳಿಸಿದ್ದಾರೆ.

ಭಾನುವಾರ ತಮ್ಮ ಫೇಸ್‌ಬುಕ್ ಪೋಸ್ಟ್‌ನಲ್ಲಿ ಈ ವಿಚಾರ ತಿಳಿಸಿದ ಸಚಿವರು, 'ಎರಡು ರಕ್ಷಣಾ ಕಾರಿಡಾರ್ ಯೋಜನೆಗಳಿಂದ 3.5 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿದ್ದು, ಉತ್ತರ ಪ್ರದೇಶದಲ್ಲಿ 2.5 ಲಕ್ಷ ಹಾಗೂ ತಮಿಳುನಾಡಿನಲ್ಲಿ 1 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಈಗಾಗಲೇ ತಮಿಳುನಾಡಿನಲ್ಲಿ ಈ ಯೋಜನೆಗೆ 3200 ಕೋಟಿ ಬಂಡವಾಳ ಘೋಷಣೆ ಮಾಡಲಾಗಿದೆ. ಇನ್ನು ಉತ್ತರ ಪ್ರದೇಶದ ಕಾರಿಡಾರ್ ಯೋಜನೆಗೆ ಬಂಡವಾಳ ವಿಭಾಗವನ್ನು ರಚಿಸಲಾಗಿದೆ' ಎಂದು ವಿವರಿಸಿದ್ದಾರೆ.

ಇನ್ನು ಭಾರತದಲ್ಲಿ ವ್ಯಾಪಾರ ಸರಳೀಕರಣಗೊಳಿಸಿರುವ ವಿಚಾರ ಪ್ರಸ್ತಾಪಿಸಿರುವ ಸಚಿವರು, 'ಭಾರತ ಜಾಗತಿಕ ಮಟ್ಟದಲ್ಲಿ ಉದ್ಯಮ ಸ್ನೇಹಿ ವಾತಾವರಣ ನಿರ್ಮಿಸಿರುವ ರಾಷ್ಟ್ರಗಳ ಪೈಕಿ 2014ರಲ್ಲಿ ಭಾರತ 142ನೇ ಸ್ಥಾನ ಪಡೆದಿತ್ತು. ಆದರೆ 2018ರ ಹೊತ್ತಿಗೆ 65 ಸ್ಥಾನಗಳ ಭರ್ಜರಿ ಜಿಗಿತ ಕಂಡು 77ನೇ ಸ್ಥಾನದಲ್ಲಿದೆ' ಎಂದು ತಮ್ಮ ಸರಕಾರದ ಕಾರ್ಯವನ್ನು ಸಮರ್ಥಿಸಿಕೊಂಡಿದ್ದಾರೆ.

## ಅಮೋಲ್‌ಪಾಲೇಕರ್ ಭಾಷಣಕ್ಕೆ ಅಡ್ಡಿ



**ಮುಂಬೈ:** ಕೇಂದ್ರ ಸರಕಾರವನ್ನು ಟೀಕಿಸಿದ ಹಿನ್ನೆಲೆಯಲ್ಲಿ ಹಿರಿಯ ನಟ, ನಿರ್ದೇಶಕ ಅಮೋಲ್ ಪಾಲೇಕರ್ ಅವರ ಭಾಷಣಕ್ಕೆ ರಾಷ್ಟ್ರೀಯ ಆಧುನಿಕ ಕಲಾ ಗ್ಯಾಲರಿ(ಎನ್‌ಜಿಎಂಎ)ಯ ಸದಸ್ಯರು ಅಡ್ಡಿಪಡಿಸಿರುವ ಘಟನೆ ನಡೆದಿದೆ. ಖ್ಯಾತ ಕಲಾವಿದ ಪ್ರಭಾಕರ್ ಬಾರ್ವೆ ಸ್ಮರಣೆಯ ಹಿನ್ನೆಯಲ್ಲಿ ಆಯೋಜಿಸಿದ್ದ ಪ್ರದರ್ಶನದ ಆರಂಭದಲ್ಲಿ ಅಮೋಲ್ ಪಾಲೇಕರ್ ಮಾತನಾಡುವಾಗ ಈ ಘಟನೆ ನಡೆದಿದೆ. ಬೆಂಗಳೂರು ಹಾಗೂ ಮುಂಬೈ ಕೇಂದ್ರಗಳಲ್ಲಿನ ಸಲಹಾ ಸಮಿತಿಯನ್ನು ರದ್ದುಪಡಿಸಿರುವ ಸಂಸ್ಕೃತಿ ಸಚಿವಾಲಯದ ಕಾರ್ಯ ಟೀಕಿಸಿರುವ ಪಾಲೇಕರ್ ಅವರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿಡಿವೆ.

## ದೇಶವ್ಯಾಪ್ತಿ ಹೆಚ್ಚುತ್ತಿರುವ ಹಂದಿಜ್ವರ

**ಪ್ರತಿ ವರ್ಷದಂತೆ ಈ ವರ್ಷವೂ ಹಂದಿ ಜ್ವರ ದೇಶದ ಹಲವು ರಾಜ್ಯಗಳನ್ನು ಕಾಡುತ್ತಿದ್ದು, ಈ ಬಾರಿ ಈ ಭಯಾನಕ ಜ್ವರದ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿರುವುದು ಆತಂಕಕಾರಿಯಾಗಿದೆ. 2019ರ ಜನವರಿಯಲ್ಲಿ 6000ಕ್ಕೂ ಹೆಚ್ಚು ಹಂದಿ ಜ್ವರ ಪ್ರಕರಣಗಳು ದಾಖಲಾಗಿದ್ದು, ಸುಮಾರು 229 ಮಂದಿ ಮೃತಪಟ್ಟಿದ್ದಾರೆ ಎಂಬ ಮಾಹಿತಿಯನ್ನು ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ ಹೊರ ಹಾಕಿದೆ. ಈ ಕುರಿತ ಪ್ರಮುಖ ಮಾಹಿತಿ ಹೀಗಿವೆ...**

### ಮೃತಪಟ್ಟವರ ಪ್ರಮಾಣ

| ವರ್ಷ | ದೆಹಲಿ | ಭಾರತ |
|---|---|---|
| 2012 | 4 | 405 |
| 2013 | 16 | 700 |
| 2014 | 4 | 200 |
| 2015 | 12 | 2,990 |
| 2016 | 6 | 300 |
| 2017 | 16 | 2,270 |
| 2018 | 8 | 1,100 |
| 2019 | 0 | 226 |




### ದಾಖಲಾಗಿರುವ ಪ್ರಕರಣಗಳು

| ವರ್ಷ | ದೆಹಲಿ | ಭಾರತ |
|---|---|---|
| 2012 | 100 | 5,044 |
| 2013 | 1,511 | 5,044 |
| 2014 | 0 | 1000 |
| 2015 | 4,307 | 42,592 |
| 2016 | 200 | 1500 |
| 2017 | 2,835 | 38,811 |
| 2018 | 200 | 13,000 |
| 2019 | 1,011 | 6,601 |

### ತಡೆಗಟ್ಟುವ ಕ್ರಮಗಳು

ಶುಚಿ ವಾತಾವರಣ
ಈ ರೋಗದ ಲಕ್ಷಣಗಳು ಕಂಡು ಬಂದ ಕೂಡಲೇ ಜಾಗ್ರತೆ ವಹಿಸುವುದು.
ಉಸಿರಾಟ ತೊಂದರೆ ಇದ್ದರೆ ಅಲಕ್ಷ್ಯ ಮಾಡದೇ ಸೂಕ್ತ ಚಿಕಿತ್ಸೆ ಪಡೆಯುವುದು
ಉತ್ತಮ ಆಹಾರ ಸೇವನೆ, ಜಂಕ್ ಫುಡ್ ನಿಷೇಧ
ಜ್ವರ ಸೋಂಕು ಇದ್ದಲ್ಲಿ ಮನೆಯಲ್ಲಿಯೇ ವಿಶ್ರಾಂತಿ ಪಡೆಯುವುದು.
(ಮಾಹಿತಿ: ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ)

### ಬಳಲಿದ ರಾಜ್ಯಗಳು

| ರಾಜ್ಯಗಳು | % |
|---|---|
| ರಾಜಸ್ಥಾನ | 85 |
| ಗುಜರಾತ್ | 43 |
| ಪಂಜಾಬ್ | 30 |
| ಮಹಾರಾಷ್ಟ್ರ | 12 |

### ಪ್ರಾಥಮಿಕ ಲಕ್ಷಣಗಳು

- ಜ್ವರ, ಕೆಮ್ಮು
- ತಲೆನೋವು
- ಸ್ನಾಯು ಸೆಳೆತ ಮತ್ತು ಕೀಲುನೋವು
- ಗಂಟಲು ನೋವು
- ಮೂಗು ಸೋರುವಿಕೆ
- ವಿಪರೀತ ವಾಂತಿ



### ಗಂಭೀರ ಲಕ್ಷಣಗಳು

- ಅಂಗಾಂಗಗಳ ವೈಫಲ್ಯತೆ
- ಶ್ವಾಸಕೋಶದ ಉರಿ
- ಉಸಿರಾಟದ ತೊಂದರೆ

## ಟಿಎಂಸಿ ಶಾಸಕ ಹತ್ಯೆ: ಬಿಜೆಪಿ ನಾಯಕನ ವಿರುದ್ಧ ದೂರು



**ಕೋಲ್ಕತಾ:** ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯಲ್ಲಿ ತೃಣಮೂಲ ಕಾಂಗ್ರೆಸ್ ಶಾಸಕ ಸತ್ಯಜಿತ್ ವಿಸ್ವಾಸ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕ ಮುಕುಲ್ ರಾಯ್ ಸೇರಿದಂತೆ ಐವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಪಶ್ಚಿಮ ಬಂಗಾಳ ಪೋಲೀಸರು ಇವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದು, ಇತರೆ ನಾಲ್ವರು ಆರೋಪಿಗಳ ಪೈಕಿ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಕೃಷ್ಣಗಂಜ್ ವಿಧಾನಸಭಾ ಕ್ಷೇತ್ರದ ಟಿಎಂಸಿ ಶಾಸಕ ಸತ್ಯಜಿತ್ ಬಿಸ್ವಾಸ್ ಅವರನ್ನು ಶನಿವಾರ ಸಂಜೆ ಬಾಂಗ್ಲಾದೇಶ ಗಡಿಯಲ್ಲಿರುವ ಫೂಲ್ಬಾರಿ ಪ್ರದೇಶದಲ್ಲಿ ನಡೆದ ಸರಸ್ವತಿ ಪೂಜಾ ಕಾರ್ಯಕ್ರಮದ ವೇಳೆ ಗುಂಡಿಟ್ಟು ಹತ್ಯೆ ಮಾಡಲಾಗಿತ್ತು.

ಗುಂಡಿನ ದಾಳಿ ನಂತರ ಸತ್ಯಜಿತ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತಾದರೂ ದಾರಿ ಮಧ್ಯದಲ್ಲೇ ಬಿಸ್ವಾಸ್ ಅವರು ಕೊನೆಯುಸಿರೆಳೆದಿದ್ದಾರೆ ಎಂದು ವೈದ್ಯರು ತಿಳಿಸಿದ್ದರು.

ಈ ಪ್ರಕರಣದ ವಿಚಾರವಾಗಿ ಭಾನುವಾರ ಹಿರಿಯ ಪೊಲೀಸ್ ಅಧಿಕಾರಿಗಳು, 'ಈ ಕೊಲೆ ಪ್ರಕರಣದಲ್ಲಿ ದೇಶಿ ನಿರ್ಮಿತ ಪಿಸ್ತೂಲ್ ಬಳಸಲಾಗಿದ್ದು, ಈ ಪಿಸ್ತೂಲ್ ಅನ್ನು ವಶಕ್ಕೆ ಪಡೆಯಲಾಗಿದೆ. ಈವರೆಗೂ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಮೂವರನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಹತ್ಯೆಗೊಳಗಾದ ವ್ಯಕ್ತಿಗೆ ಹಿಂದಿನಿಂದ ಗುಂಡು ಹಾರಿಸಲಾಗಿದ್ದು, ಇದೊಂದು ಪೂರ್ವಯೋಜಿತ ಕೃತ್ಯವಾಗಿದೆ' ಎಂದು ವಿವರಿಸಿದರು.

ಇನ್ನು ಹಂತಕ ಆ ಪ್ರದೇಶದಿಂದ ತಪ್ಪಿಸಿಕೊಂಡಿರುವ ಸಾಧ್ಯತೆಗಳ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಪೊಲೀಸ್ ಅಧಿಕಾರಿಗಳು, 'ಹತ್ಯೆಯಾದ ಪ್ರದೇಶ ಬಾಂಗ್ಲಾದೇಶ ಗಡಿಗೆ ಅಂಟಿಕೊಂಡಿದ್ದು, ಹಂತಕ ನೆರೆ ದೇಶಕ್ಕೆ ಪರಾರಿಯಾಗಿರುವ ಸಾಧ್ಯತೆ ಇದೆ. ಹೀಗಾಗಿ ಗಡಿಯಲ್ಲಿ ಪ್ರತಿಯೊಂದು ಚಲನವಲನದ ಮೇಲೆ ಕಣ್ಣಿಡಲು ಹೈ ಅಲರ್ಟ್ ಘೋಷಿಸಲಾಗಿದೆ' ಎಂದರು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 080-2860 5544, 2860 0054
Printed MNS Printers TVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:4, Issue:38